# ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ನಡವಳಿಗಳು

ವಿಷಯ: ಪ್ರಾತ್ಯಕ್ಷಿಕ ಮೌಲ್ಯಮಾಪನ (Actuarial Valuation) ಆಧಾರದ ಮೇಲೆ ಕವಿಪ್ರನಿನಿ ಮತ್ತು ವಿಸಕಂಗಳು ಪರಿಷ್ಕೃತ ದರದಲ್ಲಿ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಪಾವತಿಸುವ ಕುರಿತು.

ಓದಲಾಗಿದೆ:
1. ಕವಿಪ್ರನಿನಿ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ7/2000-01 ದಿನಾಂಕ 22-09-2000
2. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ. ಡಿಇ 14 ಪಿಎಸ್‌ಆರ್ 2002 ದಿನಾಂಕ 31-05-2002 ("ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕವಿಪ್ರನಿನಿ ಉದ್ಯಮಗಳು ಮತ್ತು ಅದರ ಸಿಬ್ಬಂದಿಯ ವಿದ್ಯುಚ್ಛಕ್ತಿ ವಿತರಣಾ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವರ್ಗಾವಣೆ) ನಿಯಮಗಳು 2002"))
3. ಸರ್ಕಾರಿ ಆದೇಶ ಸಂಖ್ಯೆ ಡಿಇ 15 ಪಿಎಸ್‌ಆರ್ 2002 ದಿನಾಂಕ 19.12.2002.
4. M/s Thanawala Consultancy Services ರವರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 27-01-2003.
5. ಈ ಕಛೇರಿ ಪತ್ರ ಸಂಖ್ಯೆ. ನಿ(ಪಿಂ & ಉ ಟ್ರಸ್ಟ್)/227-32 ದಿನಾಂಕ 05-04-2004.
6. ಆದೇಶ ಸಂಖ್ಯೆ. ಕವಿಪ್ರನಿನಿ ಮತ್ತು ವಿಸಕಂಗಳ ಪಿಂ & ಉ ಟ್ರಸ್ಟ್/ಹಿಸ-1/198-212 ದಿನಾಂಕ 11.06.2007.
7. Sri K.A.Pandit (of Mumbai) ರವರ ಪ್ರಾತ್ಯಕ್ಷಿಕ ಮೌಲಮಾಪನ ವರದಿ.
8. M/s Mercer Consultancy (India) Private Limited ರವರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 09-09-2009.
9. ಟ್ರಸ್ಟ್ ಆದೇಶ ಸಂಖ್ಯೆ. ಪಿಂ&ಉ ಟ್ರಸ್ಟ್/ಹಿಸ-1/18/2002-03/1687-1709 ದಿನಾಂಕ 15-02-2010.
10. M/s Armstrong International Employees Benefits Solution ರವರ 31-03-2011ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 14-12-2011.
11. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಪಿ7/2011-12 ಬೆಂಗಳೂರು ದಿನಾಂಕ 23-01-2012.
12. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2011-12/ಸಿವೈಎಸ್ 29 ದಿನಾಂಕ 12-10-2012.
13. M/s Armstrong International Employees Benefits Solution ರವರ 31-03-2012ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 26-05-2013.
14. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2011-12/ಸಿವೈಎಸ್-07 ಬೆಂಗಳೂರು ದಿನಾಂಕ 27-05-2013.
15. M/s Armstrong International Employees Benefits Solution ರವರ 31-03-2013ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 29-09-2014.
16. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2012-13/ಸಿವೈಎಸ್-31 ದಿನಾಂಕ 11-11-2014.
17. M/s Armstrong International Consultants, Coimbatore ರವರ 31-03-2014ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 19-12-2015.
18. M/s Armstrong International Consultants, Coimbatore ರವರ 31-03-2015ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 19-12-2015.
19. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2015-16/ಸಿವೈಎಸ್-58 ದಿನಾಂಕ 23-02-2016.
20. M/s Armstrong International Consultants, Coimbatore ರವರ 31-03-2016ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 19-12-2016.
21. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2017-18/ಸಿವೈಎಸ್-03 ದಿನಾಂಕ 11-05-2017.
22. M/s Kapadia Actuaries and Consultants, Mumbai ರವರ 31-03-2017ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 28-05-2018.
23. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2017-18/ಸಿವೈಎಸ್-07 ದಿನಾಂಕ 22-11-2018.
24. M/s Kapadia Actuaries and Consultants, Mumbai ರವರ 31-03-2018ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 20-05-2019.
25. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2019-20/ಸಿವೈಎಸ್-13 ದಿನಾಂಕ 30-10-2019.
26. M/s Kapadia Actuaries and Consultants, Mumbai ರವರ 31-03-2019ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 11-02-2020.
27. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2021-22/ಸಿವೈಎಸ್-03 ದಿನಾಂಕ 28-05-2021.
28. M/s Armstrong International Consultants, Coimbatore ರವರ 31-03-2020ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿ ದಿನಾಂಕ 02-08-2021.

*************

**ಪ್ರಸ್ತಾವನೆ:**

1. ಮೇಲೆ (1)ರಲ್ಲಿ ಓದಲಾದ ನಿಗಮದ ಆದೇಶದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳನ್ನು ರಚಿಸಲಾಗಿದ್ದು, ದಿನಾಂಕ 12.01.2001 ರಿಂದ ಕಾರ್ಯ ನಿರ್ವಹಿಸುತ್ತಿವೆ.

2. ಕವಿಪ್ರನಿನಿಯನ್ನು ಪ್ರತ್ಯೇಕಿಸುವ ಮತ್ತು ದಿನಾಂಕ 01.06.2002 ರಿಂದ ವಿಸಕಂಗಳನ್ನು ರಚಿಸುವ ಸಂದರ್ಭದಲ್ಲಿ, ಮೇಲೆ (2)ರಲ್ಲಿ ಓದಲಾದ ಅಧಿಸೂಚನೆಯನುಸಾರ ಕರ್ನಾಟಕ ಸರ್ಕಾರವು ಎರಡನೇ ವರ್ಗಾವಣೆ ಯೋಜನೆ ನಿಯಮಗಳನ್ನು ಪ್ರಕಟಿಸಿರುತ್ತದೆ. ಸದರಿ ನಿಯಮಾವಳಿಗಳನುಸಾರ ನಿರ್ದಿಷ್ಟಪಡಿಸಲಾದ ಸಿಬ್ಬಂದಿಯುಸಲ್ಲಿಸಿದ ಸೇವೆಗಳಿಗಾಗಿ ನಿವೃತ್ತಿ ವೇತನ ನಿಧಿಗಳು ಮತ್ತು ಶಾಸನ ಪ್ರದತ್ತ ಹಾಗೂ ಇತರೇ ಸಿಬ್ಬಂದಿ ಸಂಬಂಧಿತ ನಿಧಿಗಳ ಸಂಗ್ರಹಣೆಗೆ ರಾಜ್ಯ ಸರ್ಕಾರವು ಜವಾಬ್ದಾರಿಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲ ಮತ್ತು ನಿರ್ದಿಷ್ಟಪಡಿಸಲಾದ ಸಿಬ್ಬಂದಿಯ ಎರಡನೇ ವರ್ಗಾವಣೆ ಜಾರಿಯಾದ ಆಯಾಯ ದಿನಾಂಕದಲ್ಲಿದ್ದಂತೆ ನಿಧಿ ಸಂಗ್ರಹಣೆ ಮಾಡದ ಮಟ್ಟಿಗೆ ರಾಜ್ಯ ಸರ್ಕಾರವು ಹೊಣೆಯಾಗಿರುವುದೇ ಹೊರತು ವಿದ್ಯುತ್ ಸರಬರಾಜು ಕಂಪನಿಯದಲ್ಲವೆಂದು ತಿಳಿಸಲಾಗಿದೆ.

3. ದಿನಾಂಕ 31.05.2002ರಲ್ಲಿರುವಂತೆ ಪ್ರಾತ್ಯಕ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನಿವೃತ್ತಿ ಸೌಲಭ್ಯಗಳ ಹೊಣೆಗೆ ಸಂಬಂಧಿಸಿದಂತೆ, ಮೂಲಧನ ನಿಧಿಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರವು "Pay-as-you-go" ಪದ್ಧತಿಯನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಿರುತ್ತದೆ. ಅದರಂತೆ, ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಕೆಳಗಿನಂತೆ ಅನುಮೋದಿಸಿದೆ.

(ಅ) ಕವಿಪ್ರನಿನಿ ಮತ್ತು ವಿಸಕಂಗಳ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪಾವತಿಸಲು "Pay-as-you-go" ಪದ್ಧತಿಯನ್ನು ಅನುಸರಿಸುವುದು.

(ಆ) ದಿನಾಂಕ 01.06.2002 ರಿಂದ ಜಾರಿಗೆ ಬರುವಂತೆ ಎರಡನೇ ವರ್ಗಾವಣೆ ಯೋಜನೆಯಡಿಯಲ್ಲಿ ವರ್ಗಾವಣೆಗೊಳ್ಳುವ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಪಾವತಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ನಿಧಿ ಬಿಡುಗಡೆ ಮಾಡುವ ಮಟ್ಟಿಗೆ ಮತ್ತು ಕವಿಪ್ರನಿನಿ ಮತ್ತು ವಿಸಕಂಗಳು ವಂತಿಗೆ ನೀಡುವ ಪಿಂಚಣಿ ಮತ್ತು ಉಪದಾನ ನಿಧಿಯ ಉಸ್ತುವಾರಿ, ನಿರ್ವಹಣೆ ಮತ್ತು ಆಡಳಿತಕ್ಕಾಗಿ ಕವಿಪ್ರನಿನಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳನ್ನು "ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳು" ಎಂದು ಮರುನಾಮಕರಣ ಮತ್ತು ಪುನರ್ರಚಿಸಿರುತ್ತದೆ.

4. ಮೇಲೆ 4,7,8,10,13,15,17,18,20,22,24 ಮತ್ತು 26ರಲ್ಲಿ ಓದಲಾದ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಗಳನುಸಾರ ಮೇಲೆ 5,6,9,11,12,14,16,19,21,23,25 ಮತ್ತು 27ರಲ್ಲಿ ಓದಲಾದ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಪತ್ರ/ಆದೇಶಗಳಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸಬೇಕಾದ ಈ ಕೆಳಗಿನ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ತಿಳಿಸಲಾಗಿರುತ್ತದೆ. (ಟ್ರಸ್ಟ್‌ನ ಸಂಬಂಧಪಟ್ಟ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಗಳಲ್ಲಿ ಅನುಮೋದನೆಗೊಂಡಂತೆ)

| ಕ್ರಮ ಸಂಖ್ಯೆ | ಅವಧಿಗೆ ಸಂಬಂಧಪಟ್ಟ ವಂತಿಗೆ ದರಗಳು | | ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳು | | ಇವರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಗಳ ಆಧಾರದ ಮೇಲೆ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳು |
|---|---|---|---|---|---|
| | ಇಂದ | ಗೆ | ಮೂಲವೇತನ+ಡಿಯರ್‌ನೆಸ್‌ಪೇ +ತುಟ್ಟಿಭತ್ಯೆಗಳ ಮೇಲೆ ಪಿಂಚಣಿ ವಂತಿಗೆ | ಮೂಲವೇತನ+ಡಿಯರ್ ನೆಸ್ ಪೇಗಳ ಮೇಲೆ ಉಪದಾನ ವಂತಿಗೆ | |
| 1 | 01.06.2002 | 31.03.2004 | 15.05% | 1.86% | M/s Thanawala Consultancy Services |
| 2 | 01.04.2004 | 31.03.2005 | 19.06% | 2.36% | ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಆಂತರಿಕ ಲೆಕ್ಕಾಚಾರ |
| 3 | 01.04.2005 | 31.03.2008 | 21.00% | 1.77% | Sri K.A. Pandith, Mumbai |
| 4 | 01.04.2008 | 31.03.2010 | 26.13% | 2.24% | M/s Mercer Consultancy (India) Pvt Ltd. |
| 5 | 01.04.2010 | 31.03.2011 | 29.11% | 3.34% | M/s Armstrong International Employees Benefit Solutions, |
| 6 | 01.04.2011 | 31.03.2012 | 30.00% | 6.01% | M/s Armstrong International Employees Benefit Solutions, |
| 7 | 01.04.2012 | 31.03.2013 | 30.00% | 6.01% | M/s Armstrong International Employees Benefit Solutions, |

| | | | | | |
|---|---|---|---|---|---|
| 8 | 01.04.2013 | 31.03.2014 | 32.01% | 6.03% | M/s Armstrong International Consultants |
| 9 | 01.04.2014 | 31.03.2015 | 33.02% | 6.06% | M/s Armstrong International Consultants |
| 10 | 01.04.2015 | 31.03.2016 | 33.05% | 6.08% | M/s Armstrong International Consultants |
| 11 | 01.04.2016 | 31.03.2017 | 42.53% | 6.08% | M/s Kapadia Actuaries and Consultants |
| 12 | 01.04.2017 | 31.03.2018 | 57.30% | 6.08% | M/s Kapadia Actuaries and Consultants |
| 13 | 01.04.2018 | 31.03.2019 | 68.95% | 6.08% | M/s Kapadia Actuaries and Consultants |

5. M/s Armstrong International Consultants, Coimbatore ರವರು ದಿನಾಂಕ 02.08.2021ರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯಲ್ಲಿ ದಿನಾಂಕ 31.03.2020ರ ಅಂತ್ಯಕ್ಕೆ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನಗಳ ಪ್ರಾತ್ಯಕ್ಷಿಕ ಮೌಲ್ಯಮಾಪನ ಲೆಕ್ಕ ಫಲಿತಾಂಶವನ್ನು ಪ್ರಸ್ತುತ ಪಡಿಸಿರುತ್ತಾರೆ ಹಾಗೂ ಪ್ರಾತ್ಯಕ್ಷಿಕ ಮೌಲ್ಯಮಾಪನಕ್ಕೆ ಸಂಬಂಧಿಸಿರುವ ವರ್ಷದಿಂದಲೇ ಪಿಂಚಣಿ ಮತ್ತು ಉಪದಾನ ವಂತಿಗೆಯನ್ನು ಆಕರಿಸುವಂತೆ ಸೂಚಿಸಿರುತ್ತಾರೆ. ಸದರಿ ವರದಿ ಪ್ರಕಾರ ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿ ಮಾಡಬೇಕಾದ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳು ಈ ಕೆಳಗಿನಂತಿವೆ.

<u>ದಿನಾಂಕ 01.04.2019ರಿಂದ ಮತ್ತು ಮುಂದಕ್ಕೆ:</u>

i) ಪಿಂಚಣಿ ವಂತಿಗೆ – 64.00% ಮೂಲವೇತನ+ಡಿಯರ್‌ನೆಸ್‌ಪೇ+ತುಟ್ಟಿಭತ್ಯೆಗಳ ಮೇಲೆ

ii) ಉಪದಾನ ವಂತಿಗೆ – 6.05% ಮೂಲವೇತನ+ಡಿಯರ್‌ನೆಸ್‌ಪೇಗಳ ಮೇಲೆ

ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ (ಉದಾಹರಣೆಗೆ 31.03.2020ರ ಅಂತ್ಯಕ್ಕೆ) ಸಿಬ್ಬಂದಿ/ಪಿಂಚಣಿ/ ಕುಟುಂಬ ಪಿಂಚಣಿದಾರರ ಮಾಹಿತಿಗಳನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸಿದರೂ ಸಹ ಸಾಮಾನ್ಯವಾಗಿ ವರದಿಯಲ್ಲಿ ಶಿಫಾರಸ್ಸು ಮಾಡಲಾದ ವಂತಿಗೆ ದರಗಳನ್ನು ಅದೇ ಆರ್ಥಿಕ ವರ್ಷದ ಆರಂಭದಿಂದಲೇ (ಉದಾಹರಣೆಗೆ 01.04.2019ರಿಂದ) ಅನುಷ್ಠಾನಗೊಳಿಸುವ ಕ್ರಮವನ್ನು ಅನುಸರಿಸಲಾಗುತ್ತಿದೆ.

6. ದಿನಾಂಕ 31.03.2020ರ ಅಂತ್ಯಕ್ಕೆ ಪ್ರಾತ್ಯಕ್ಷಿಕ ಮೌಲ್ಯಮಾಪಕರು ಕವಿಪ್ರನಿನಿ/ವಿಸಕಂಗಳಿಗೆ ಸಂಬಂಧಿಸಿದ ಕ್ರೋಢೀಕೃತ ಪಿಂಚಣಿ ಮತ್ತು ಉಪದಾನ ಪ್ರಾತ್ಯಕ್ಷಿಕ ವರದಿಯ ಕರಡು ಪ್ರತಿಯನ್ನು ದಿನಾಂಕ 28.05.2021ರಂದು ಎಲ್ಲಾ ಟ್ರಸ್ಟಿಗಳಿಗೂ ಈ ಕಛೇರಿಯಿಂದ ಕಳುಹಿಸಲು ವ್ಯವಸ್ಥೆ ಮಾಡಲಾಗಿರುತ್ತದೆ. ಸದರಿ ಪತ್ರದಲ್ಲಿ ವರದಿಯಲ್ಲಿನ ಯಾವುದೇ ಅಂಶಗಳ (Assumptions), ಆತಂಕಗಳು (Apprehension) ಮತ್ತು ಇತರೆ ವಿಷಯಗಳ ಬಗ್ಗೆ ನೀಡಿರುವ ಸ್ಪಷ್ಟೀಕರಣಗಳನ್ನು ಅಭ್ಯಸಿಸಿ ಹೆಚ್ಚಿನ ಮಾಹಿತಿ ಹಾಗೂ ಸ್ಪಷ್ಟೀಕರಣ ಬೇಕಿದ್ದಲ್ಲಿ ಒಂದು ವಾರದೊಳಗೆ ವಿಷಯವನ್ನು ನಿರ್ದಿಷ್ಟವಾಗಿ ವಿಶದೀಕರಿಸಿ ಈ ಕಛೇರಿಗೆ ತಿಳಿಸಲು ಕೋರಲಾಗಿರುತ್ತದೆ ಹಾಗೂ ವರದಿಯಲ್ಲಿನ ಅಂಶಗಳನ್ನು ಅನುಷ್ಠಾನಕ್ಕೆ ತರಲು ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಿರ್ಣಯಕ್ಕಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಕುರಿತು ಟ್ರಸ್ಟಿಗಳಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರುವುದಿಲ್ಲ.

7. ಸದರಿ ಪತ್ರಕ್ಕೆ ಟ್ರಸ್ಟಿಗಳಿಂದ ಯಾವುದೇ ಪ್ರತಿಕ್ರಿಯೆಯು ವ್ಯಕ್ತವಾಗಿಲ್ಲದೇ ಇರುವುದರಿಂದ ವರದಿಯ ಕುರಿತು ಪ್ರತಿಕ್ರಿಯೆ ತಿಳಿಸುವಂತೆ ಎಲ್ಲಾ ಟ್ರಸ್ಟಿಗಳಿಗೆ ಈ ಕಛೇರಿ ಪತ್ರ ದಿನಾಂಕ 05.07.2021ರಲ್ಲಿ ನೆನಪೋಲೆಯನ್ನು ಸಹ ಕಳುಹಿಸಲಾಗಿರುತ್ತದೆ. ಟ್ರಸ್ಟ್‌ನ ಪತ್ರಗಳಿಗೆ ಮುಖ್ಯ ಆರ್ಥಿಕ ಅಧಿಕಾರಿ, ಮವಿಕಂ, ಚಾವಿಸನಿ, ಬೆವಿಕಂ, ಗುವಿಕಂ ಮತ್ತು ಆರ್ಥಿಕ ಸಲಹೆಗಾರರು(ಆಂ.ಪ), ಕವಿಪ್ರನಿನಿರವರುಗಳು ಮಾತ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿರುತ್ತಾರೆ. ಇವರ ಪ್ರತಿಕ್ರಿಯೆಗಳಿಗೆ ಟ್ರಸ್ಟ್‌ನಿಂದ ಪ್ರತ್ಯೇಕವಾಗಿ ವಿವರಣೆಯನ್ನು ಒದಗಿಸಲಾಗಿರುತ್ತದೆ.

8. ಸಾಮಾನ್ಯವಾಗಿ, ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯನ್ನು ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ಮಂಡಿಸಿ ಚರ್ಚೆಯ ನಂತರ ಅಂಗೀಕಾರ ಮಾಡಲಾಗುತ್ತದೆ. ಆದರೆ, ದಿನಾಂಕ 26.10.2018ರ ಸಭೆಯ ನಂತರ ಬೋರ್ಡ್ ಆಫ್ ಟ್ರಸ್ಟೀಸ್ ಸಭೆ ನಡೆದಿಲ್ಲವಾದ್ದರಿಂದ ಈ ವರದಿಯನ್ನು ಸಭೆಯಲ್ಲಿ ಮಂಡಿಸಲು ಅವಕಾಶವಾಗಿರುವುದಿಲ್ಲ. ಮಾರ್ಚ್–2020 ರಿಂದ ಕೋವಿಡ್–19 ಜಾಗತಿಕ ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹಬ್ಬಿರುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಾಕ್‌ಡೌನ್ ಸೇರಿದಂತೆ, ಹಲವಾರು ಉಪಕ್ರಮಗಳನ್ನು ಜಾರಿಗೊಳಿಸಿದ್ದರಿಂದ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯು ಆಯೋಜಿತಗೊಂಡಿರುವುದಿಲ್ಲ.

ತದನಂತರ ಕೋವಿಡ್-19ರ ಪ್ರಕರಣಗಳಲ್ಲಿ ಇಳಿಕೆ ಉಂಟಾಗಿ, ನಿರ್ಬಂಧನೆಗಳನ್ನು ಕೇಂದ್ರ/ರಾಜ್ಯ ಸರ್ಕಾರಗಳು ಸಡಿಲಗೊಳಿಸಿರುವುದರಿಂದ ಏಪ್ರಿಲ್-2021ರ ಎರಡನೇ ವಾರದಲ್ಲಿ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯನ್ನು ನಡೆಸುವ ಕುರಿತು ಯೋಜಿಸಲಾಗಿತ್ತು. ಆದರೆ, ಕೋವಿಡ್-19ರ ಸಾಂಕ್ರಾಮಿಕ ರೋಗದ ಎರಡನೇ ಅಲೆಯು ಅಪ್ಪಳಿಸಿ ರೋಗದ ಪ್ರಕರಣಗಳಲ್ಲಿ ತೀವ್ರವಾದ ಏರಿಕೆ ಉಂಟಾಗಿರುವುದರಿಂದ ಕರ್ನಾಟಕ ಸರ್ಕಾರವು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಹಾಗೂ ಸಾಂಕ್ರಾಮಿಕದ ಹಬ್ಬುವಿಕೆಯನ್ನು ತಡೆಯುವ ದೃಷ್ಟಿಯಿಂದ ಹಲವಾರು ನಿರ್ಬಂಧನೆಗಳನ್ನು ಜಾರಿ ಮಾಡಿರುವುದರಿಂದ ಪ್ರಸ್ತುತ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯನ್ನು ಆಯೋಜಿಸುವುದು ಸಾಧ್ಯವಾಗಿರುವುದಿಲ್ಲ.

9. ದಿನಾಂಕ 28.06.2021ರಂದು ನಡೆದ 46ನೇ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ಆರ್ಥಿಕ ವರ್ಷ 2019-20ರ 31.03.2020ರ ಅಂತ್ಯಕ್ಕೆ ಪಿಂಚಣಿ ಮತ್ತು ಉಪದಾನ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ವಿಷಯ ಸಂಖ್ಯೆ 8.4ರಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿರತ್ತದೆ.

> ***ವಿಷಯ ಸಂಖ್ಯೆ 8.4- ಟ್ರಸ್ಟಿಗಳ ಮತ್ತು ಕಂಪನಿಗಳ ಸ್ಪಷ್ಟೀಕರಣಗಳನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಕಳುಹಿಸಿ, ಅವುಗಳನ್ನು ಅಳವಡಿಸಿದ ತರುವಾಯ ಅವರು ನೀಡಿದ ಅಂತಿಮ ವರದಿಯಲ್ಲಿ ಶಿಫಾರಸ್ಸು ಮಾಡಲಾದ ವಂತಿಗೆ ದರಗಳನ್ನು ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯ ನಿರ್ಣಯಕ್ಕಾಗಿ ಕಾಯದೇ ದಿನಾಂಕ 01.04.2019ರಿಂದ ಅನುಷ್ಠಾನಗೊಳಿಸಲು ಅನುವಾಗುವಂತೆ ಸಭೆಯ ಚರ್ಚೆಗಾಗಿ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿ ಸೂಕ್ತ ಕ್ರಮ ಕೈಗೊಳ್ಳಲು ಟ್ರಸ್ಟ್‌ಗೆ ಅನುಮೋದನೆ ನೀಡಲಾಯಿತು.***

10. ನಿರ್ದೇಶಕರು(ಹಣಕಾಸು), ಕವಿಪ್ರನಿನಿ ಮತ್ತು ಅಧ್ಯಕ್ಷರು, ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ರವರು ಟ್ರಸ್ಟ್‌ನ ಪ್ರಸ್ತಾವನೆಯನ್ನು ಈ ಕಛೇರಿ ಟಿಪ್ಪಣಿ ದಿನಾಂಕ 03.08.2021ರಲ್ಲಿ ಅನುಮೋದಿಸಿರುತ್ತಾರೆ.

11. ಮೇಲಿನ ಕಂಡಿಕೆ-9 & 10ರ ಹಿನ್ನೆಲೆಯಲ್ಲಿ, ದಿನಾಂಕ 19.12.2002ರ ಸರ್ಕಾರದ ಆದೇಶದನುಸಾರ ಕವಿಪ್ರನಿನಿ ಮತ್ತು ವಿಸಕಂಗಳಿಗೆ ಮೇಲಿನ ದರಗಳನ್ನು ಸೂಚಿಸಲು ಈ ಆದೇಶ.

**ಆದೇಶ ಸಂಖ್ಯೆ: ಕೆಇಪಿಜಿಟಿ/ಕೆಸಿಒ123/ಪಿ7/2021-22/ಸಿವೈಎಸ್ - 12**

**ಬೆಂಗಳೂರು, ದಿನಾಂಕ** 06 AUG 2021

ಅ. ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ 31.03.2006ಕ್ಕೆ ಮತ್ತು ಹಿಂದೆ ನೇಮಕಗೊಂಡ ಎಲ್ಲಾ ಸಿಬ್ಬಂದಿಗಳಿಗೆ ಸಂಬಂಧಪಟ್ಟಂತೆ, ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸಬೇಕಾದ, ಮಾಸಿಕ ಪಿಂಚಣಿ ಮತ್ತು ಉಪದಾನಗಳ ವಂತಿಗೆಯ ವಂತಿಗೆ ದರಗಳನ್ನು ಈ ಕೆಳಗಿನಂತೆ ಪರಿಷ್ಕರಿಸಿದೆ ಹಾಗೂ ನಿಗದಿಪಡಿಸಿದೆ.

| ಅವಧಿಗೆ ಸಂಬಂಧಪಟ್ಟ ವಂತಿಗೆ ದರಗಳು | | ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳು | |
|---|---|---|---|
| ಇಂದ | ಗೆ | ಮೂಲವೇತನ + ಡಿಯರ್‌ನೆಸ್‌ಪೇ + ತುಟ್ಟಿಭತ್ಯೆಗಳ ಮೇಲೆ ಪಿಂಚಣಿ ವಂತಿಗೆ | ಮೂಲವೇತನ+ಡಿಯರ್‌ನೆಸ್‌ಪೇ ಮೇಲೆ ಉಪದಾನ ವಂತಿಗೆ |
| 01.04.2019 ಮತ್ತು ಮುಂದಕ್ಕೆ | ಮುಂದಿನ ಆದೇಶದವರೆಗೆ | 64.00% | 6.05% |

ಆ. ಮೇಲೆ ತಿಳಿಸಿದಂತೆ, ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ಪರಿಷ್ಕರಿಸಿದ ಪರಿಣಾಮ, ಕವಿಪ್ರನಿನಿ ಮತ್ತು ವಿಸಕಂಗಳು ತಾವು ಪಾವತಿಸಬೇಕಾದ ವ್ಯತ್ಯಾಸದ ವಂತಿಗೆ ಮೊತ್ತವನ್ನು ಲೆಕ್ಕ ಹಾಕಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ದೃಷ್ಟಿಯಿಂದ ಟ್ರಸ್ಟ್‌ಗೆ ಅತೀ ಜರೂರು ಪಾವತಿಸುವುದು.

**ಆದೇಶದ ಮೇರೆಗೆ,**

**(ಹೆಚ್.ಆರ್.ಶ್ರೀಪಾದರಾವ್)**
**ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,**
**ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್.**

ನಿರ್ದೇಶಕರು(ಹಣಕಾಸು), ಕವಿಪ್ರನಿನಿ ಮತ್ತು ಅಧ್ಯಕ್ಷರು (ಪಿಂ & ಉ ಟ್ರಸ್ಟ್)ರವರಿಂದ ಅನುಮೋದಿಸಿದೆ

ಪ್ರತಿ ದಯಾಪರ ಅವಗಾಹನೆಗಾಗಿ:

1. ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸಸೌಧ, ಬೆಂಗಳೂರುರವರ ಆಪ್ತ ಕಾರ್ಯದರ್ಶಿ.

2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರುರವರ ಹಿರಿಯ ಆಪ್ತ ಕಾರ್ಯದರ್ಶಿ.
3. ನಿರ್ದೇಶಕರು(ಹಣಕಾಸು), ಕವಿಪ್ರನಿನಿ ಮತ್ತು ಅಧ್ಯಕ್ಷರು, ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ರವರ ಹಿರಿಯ ಆಪ್ತ ಕಾರ್ಯದರ್ಶಿ.
4. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ/ಪಿಸಿಕೆಎಲ್‌ರವರ ಹಿರಿಯ ಆಪ್ತ ಕಾರ್ಯದರ್ಶಿ.
5. ನಿರ್ದೇಶಕರು(ಆಡಳಿತ & ಮಾಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರುರವರ ಹಿರಿಯ ಆಪ್ತ ಕಾರ್ಯದರ್ಶಿ.
6. ಜಂಟಿ ಕಾರ್ಯದರ್ಶಿ (ಪಿಂಚಣಿ), ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರುರವರ ಆಪ್ತ ಕಾರ್ಯದರ್ಶಿ.

ಪ್ರತಿ ಸೂಕ್ತ ಕ್ರಮಕ್ಕಾಗಿ:

1. ನಿರ್ದೇಶಕರು(ವಾಣಿಜ್ಯ), ಪಿಸಿಕೆಎಲ್, ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹಣಕಾಸು ಮತ್ತು ವಾಣಿಜ್ಯ), ಬೆವಿಕಂ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿಗಳು, ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ.
4. ಆರ್ಥಿಕ ಸಲಹೆಗಾರರು (ಲೆಕ್ಕ ಮತ್ತು ಸಂಪನ್ಮೂಲ), ಕವಿಪ್ರನಿನಿ ಬೆಂಗಳೂರು.
5. ಆರ್ಥಿಕ ಸಲಹೆಗಾರರು (ಆಂತರಿಕ ಲೆಕ್ಕ ಪರಿಶೋಧನೆ) ಕವಿಪ್ರನಿನಿ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಕಂಪನಿ ಕಾರ್ಯದರ್ಶಿ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಇಂಜಿನಿಯರುಗಳ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.

ಪ್ರತಿ ಸೂಕ್ತ ಕ್ರಮಕ್ಕಾಗಿ:

1. ನಿಯಂತ್ರಣಾಧಿಕಾರಿ (ಹಣಕಾಸು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕರು(ನಗದು & ಲೆಕ್ಕಗಳು)/(ಪಿಂಚಣಿ ಕೋಶ)/(ಆಡಳಿತ)/(ಸಿಬ್ಬಂದಿ-1 & 2)/(ಆಂತರಿಕ ನಿರ್ವಹಣೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಲೆಕ್ಕಾಧಿಕಾರಿ(ಪಿಂಚಣಿ/ಪಿಂಚಣಿ ಕೋಶ), ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ.
   ಮುಖ್ಯ ಕಡತ.